

## ಸಂಪಿಗೆ ಹಣ್ಣು


ಕೆಂಪು ವರ್ಣದ ನೆಲ್ಲಿಕಾಯಿ ಗಾತ್ರದ ಈ ಹಣ್ಣನ್ನು ನೋಡಿದರೆ ಬಾಯಲ್ಲಿ ನೀರೂರದೆ ಇರದು. ಹುಳಿ ಮಿಶ್ರಿತ ರುಚಿ ರುಚಿ, ಸವಿಯಾದ ಈ ಹಣ್ಣಿಗೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಸಂಪಿಗೆ ಹಣ್ಣೆಂದು ಕರೆಯುತ್ತಾರೆ. ಹಾಗಂತ ಇದಕ್ಕೆ ಸಂಪಿಗೆ ಸುವಾಸನೆ ಇಲ್ಲ. ಸಂಪಿಗೆ ಹೂವಿನ ಮರದಲ್ಲಿ ಬಿಡುವ ಹಣ್ಣು ಸಹ ಅಲ್ಲ. ಪರೀಕ್ಷೆ ಮುಗಿಯುತ್ತಿದ್ದಂತೆ ಮಕ್ಕಳ ದಾಳಿ ಮಾತ್ರ ಈ ಸಂಪಿಗೆ ಮರಕ್ಕೆ. ಉಪ್ಪಿನಕಾಯಿಗೆ ಇದರ ಕಾಯಿ ಉಪಯೋಗಿಸಲ್ಪಡುತ್ತದೆ. ಮಲೆನಾಡಿನ ಗುಡ್ಡ ಬೆಟ್ಟಗಳಲ್ಲೀಗ ಮರದ ತುಂಬಾ ಗೊಂಚಲು ಗೊಂಚಲು ತೂಗಾಡುವ ಈ ಹಣ್ಣಿನದೇ ಸಂಭ್ರಮ.

■ ಸುಮಂಗಲಾ ಹೆಗಡೆ, ಹುಬ್ಬಳ್ಳಿ

## ಸರ್ಪಾಕೃತಿಯ ಅಗ್ನಿ ಶಿಲೆ

ಚಿತ್ರದುರ್ಗ 800 ಕೋಟಿ ವರ್ಷಗಳ ಹಿಂದೆ ಸಮುದ್ರ ತಳವಾಗಿತ್ತೆಂದು ನಂತರ ಘಟಿಸಿದ ಭೂಕಂಪ, ಅಗ್ನಿಸ್ಫೋಟ, ಲಾವಾರಸ ಉಕ್ಕಿ ನೆಲೆನಿಂತು ಶೈತಲೀಕರಣಹೊಂದಿ ಬಾರಿ ಗಾತ್ರದ ಕಲ್ಲುಬಂಡೆಗಳ ರಾಶಿಯಾಯಿತು ಎಂಬುದು ಇತಿಹಾಸ. ಇಲ್ಲಿನ ಬಂಡೆಗಳನ್ನು ಅಗ್ನಿಶಿಲೆ (Igneous Rock) ಎನ್ನುತ್ತಾರೆ. ನದಿಪಾತ್ರದಲ್ಲಿ ಸಿಗುವ ಶಿಲೆಗಳು ಸಂಚಿತ ಶಿಲೆಗಳು (Sedimentary Rock). ಈ ಬಂಡೆ ಎಡೆ ಎತ್ತಿದ ಹಾವಿನೋಪಾದಿಯಲ್ಲಿ ಕಾಣುತ್ತದೆ. ಇದು ಬೆಟ್ಟ ಸಾಲಿನ ಕಿನ್ನರ ಗವಿ ಎಂಬ ಜಾಗದಲ್ಲಿದೆ.

■ ಮೃತ್ಯುಂಜಯಪ್ಪ, ಚಿತ್ರದುರ್ಗ






## ಮತ ಜಾಗೃತಿ ರಥ

'ಮತ ಚಲಾಯಿಸೋಣ ನವಭಾರತ ನಿರ್ಮಿಸೋಣ' ಎಂಬ ಘೋಷವಾಕ್ಯ ಮತದಾರನ ಜಾಗೃತಿಗೆ ಕಿವಿಮಾತಾಗಿದೆ. ಇದು ಕೇವಲ ಗ್ರಾಮೀಣ ಜನರಿಗಾಗಿ, ಅನಕ್ಷರಸ್ಥರಿಗಾಗಿ ಎಂದು ಊಹಿಸಿದರೆ ನಿಮ್ಮ ಊಹೆ ತಪ್ಪು. ಬದಲಾಗಿ ಪಟ್ಟಣ ಪ್ರದೇಶದಲ್ಲಿರುವ ಮತದಾರ ಮಹಾಶಯ ಬಿಸಿಲು, ಮಳೆ, ಗಾಳಿ ಎಂಬ ನೆಪವೊಡ್ಡಿ, ಇಲ್ಲವೆ ಆಲಸ್ಯತನದಿಂದಲೂ ಮತದಾನದಿಂದ ದೂರ ಉಳಿಯುವ ಸಾಧ್ಯತೆಯಿದೆ. ಸುಭದ್ರ ಪ್ರಜಾಪ್ರಭುತ್ವಕ್ಕಾಗಿ ತಪ್ಪದೆ ಮತ ಚಲಾಯಿಸಲು ಜಾಗೃತಿ ಮೂಡಿಸುವ ಸಲುವಾಗಿ ಈ ರಥವನ್ನು ವಿಜಯಪುರದ ಜಿಲ್ಲಾಡಳಿತ ಮತ್ತು ಸ್ವೀಪ್ ಸಮಿತಿ ನಿರ್ಮಿಸಿದೆ.

■ ಪಂಡಿತರಾವ ಪಾಟೀಲ, ಸರಸಂಬಾ